ಎಂ ವಿ ಸಿ ನಂಃ **360/2023**

ಪಿ ಡಬ್ಲ್ಯುಃ **1**

ದಿನಾಂಕಃ**07/10/2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯವಿಚಾರಣೆಃ ಶ್ರೀ ಬಿ ಸಿ ವಿ ಎಸ್ ಅರ್ಜಿದಾರರ ಪರ ವಕೀಲರಿಂದಃ

ನಾನು ಈ ಅರ್ಜಿಯಲ್ಲಿ 1ನೇ ಅರ್ಜಿದಾರಳಾಗಿದ್ದು, ನನ್ನ ಸಾಕ್ಷ್ಯದ ಮುಖ್ಯವಿಚಾರಣೆಯಾಗಿ ಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿದೆ ಮತ್ತು ಸತ್ಯವಾಗಿದೆ.

ನಾನು ಈ ದಿನ ಅಪಘಾತ ಸೂಚನಾ ಪತ್ರದ ಪೊಲೀಸ್ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು, ದೂರಿನ ಪೊಲೀಸ್ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು, ಪ್ರಥಮ ವರ್ತಮಾನ ವರದಿಯ ದೃಢೀಕೃತ ಪ್ರತಿಯನ್ನು ನಿಪಿ 3 ಎಂದು, ದಿಃ 26/06/2022 ರ ದೂರಿನ ಮರುಹೇಳಿಕೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು, ಅಪರಾದ ವಿವರ ನಮೂನೆಯ ಪೊಲೀಸ್ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ವಾಹನ ತಪಾಸಣಾ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು, ಶವತನಿಖಾ ವರದಿಯ ಪೊಲೀಸ್ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 7 ಎಂದು, ಶವಪರೀಕ್ಷಾ ವರದಿಯ ಪೊಲೀಸ್ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು, ಬಾಲ್ಯ ನ್ಯಾಯಾ ಮಂಡಳಿರವರ ಮುಂದೆ ಸಲ್ಲಿಸಿದ ಅಂತಿಮ ವರದಿಯ ಪೊಲೀಸ್ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 9 ಎಂದು, ಇನ್ನೊಂದು ಅಂತಿಮ ವರದಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 10 ಎಂದು, ಮೂರು ವೈದ್ಯಕೀಯ ಬಿಲ್ಲುಗಳ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 11 ರಿಂದ 13 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯ್ತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಓ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.